# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, **ಶುಕ್ರವಾರ**, ೧೨ ಸೆಪ್ಟೆಂಬರ್, ೨೦೨೫ (**ಭಾದ್ರಪದ** ೨೧, ಶಕವರ್ಷ ೧೯೪೭)<br>BENGALURU, FRIDAY, 12 SEPTEMBER, 2025 (BHADRAPADA 21, SHAKAVARSHA 1947) | ನಂ. ೫೮೬<br>No. 586 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 54 SHASANA 2025, BENGALURU, DATED:12.09.2025**

ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 63 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ-IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 63**

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011ರ (2011ರ ಕರ್ನಾಟಕದ ಅಧಿನಿಯಮ 25) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು .

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011 (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಖಂಡ (ಎ)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಇವರು ಅಧ್ಯಕ್ಷರಾಗಿರತಕ್ಕದ್ದು."

(ii) ಖಂಡ (ಬಿ)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ನಿರ್ದೇಶಕರು, ಅಂತರ್ಜಲ ನಿರ್ದೇಶನಾಲಯ, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು."

(iii) ಖಂಡ (ಎಫ್)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಚೀಫ್ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ."

(iv) ಖಂಡ (ಎಚ್)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಚೀಫ್ ಇಂಜಿನಿಯರ್, ದಕ್ಷಿಣ ವಲಯ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ."

**3. ಪ್ರಕರಣ 11ರ ತಿದ್ದುಪಡಿ.-** ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**11. ಅಧಿಸೂಚಿತ ಮತ್ತು ಅಧಿಸೂಚಿತವಲ್ಲದ ಪ್ರದೇಶದಲ್ಲಿ ಅಂತರ್ಜಲವನ್ನು ತೆಗೆಯಲು ಮತ್ತು ಬಳಸಲು ಅನುಮತಿ ನೀಡಿಕೆ.-**"

(ii) ಉಪಪ್ರಕರಣ (1)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಕುಡಿಯುವ ನೀರಿನ ಸಾರ್ವಜನಿಕ ಮೂಲಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, (1ಎ) ಉಪಪ್ರಕರಣದಡಿ ವಿನಾಯಿತಿ ಪಡೆದವರನ್ನು ಹೊರತುಪಡಿಸಿ, ಯಾರೇ ಅಂತರ್ಜಲ ಬಳಕೆದಾರನು, ಪ್ರಾಧಿಕಾರದಿಂದ ಅನುಮತಿ ಪಡೆಯದ ಹೊರತು ಅಥವಾ ಅಥವಾ ನಿರಾಪೇಕ್ಷಣಾ ಪತ್ರವನ್ನು ಸ್ವೀಕರಿಸಿದ ಹೊರತು ಅಧಿಸೂಚಿತ ಅಥವಾ ಅಧಿಸೂಚಿತವಲ್ಲದ ಪ್ರದೇಶದಲ್ಲಿ ಯಾವುದೇ ಉದ್ದೇಶಕ್ಕಾಗಿ ಬಾವಿಯನ್ನು ಕೊರೆಯತಕ್ಕದ್ದಲ್ಲ ಅಥವಾ ತೋಡತಕ್ಕದ್ದಲ್ಲ.

**(1ಎ) ಅನುಮತಿ ಅಥವಾ ನಿರಾಪೇಕ್ಷಣಾ ಪತ್ರ ಪಡೆಯುವದರಿಂದ ವಿನಾಯತಿ ಪಡೆಯಲಾದ ಗ್ರಾಹಕರ ಪ್ರವರ್ಗಗಳು.-** ಹೊಸ ಕೊಳವೆ ಬಾವಿಯನ್ನು ಕೊರೆಯಲು ಅನುಮತಿ ಪಡೆಯುವುದು ಮತ್ತು ಅಂತರ್ಜಲ ತೆಗೆಯಲು ನಿರಾಪೇಕ್ಷಣಾ ಪತ್ರ ಕೋರುವುದರಿಂದ ವಿನಾಯಿತಿಸತಕ್ಕ ಪ್ರವರ್ಗಗಳು ಈ ಮುಂದಿನಂತಿವೆ, ಎಂದರೆ:-

(i) ಕುಡಿಯುವ ನೀರು ಮತ್ತು ಗೃಹ ಬಳಕೆಗಳಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ವಯಕ್ತಿಕ ಗೃಹಪಯೋಗಿ ಗ್ರಾಹಕರು;

(ii) ಗ್ರಾಮೀಣ ಕುಡಿಯುವ ನೀರು ಸರಬರಾಜು ಸ್ಕೀಮುಗಳು;

(iii) ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿನ ಸಶಸ್ತ್ರ ಪಡೆಯ ಕಾರ್ಯಸಂಸ್ಥೆಗಳು ಮತ್ತು ಕೇಂದ್ರೀಯ ಸಶಸ್ತ್ರ ಪೊಲೀಸ್ ದಳಗಳ ಕಾರ್ಯಸಂಸ್ಥೆಗಳು;

(iv) ಕೃಷಿ ಚಟುವಟಿಕೆಗಳು;

(v) ಅಂತರ್ಜಲ ತೆಗೆಯುತ್ತಿರುವ ಎಲ್ಲಾ ಕೈಗಾರಿಕೆಗಳು ಅಥವಾ ಗಣಿಗಾರಿಕೆ ಪ್ರಾಜೆಕ್ಟ್‌ಗಳು ಅಥವಾ ಮೂಲಸೌಕರ್ಯ ಪ್ರಾಜೆಕ್ಟ್‌ಗಳ ಎಲ್ಲಾ ನಿರ್ಧರಿಸಿದ ಘಟಕಗಳಿಗೆ ಕೇವಲ ಕುಡಿಯುವ ಅಥವಾ ಗೃಹ ಬಳಕೆಯ ಉದ್ದೇಶಗಳಿಗಾಗಿ ಮಾತ್ರ ಪ್ರತಿ ದಿನಕ್ಕೆ 5ಘನ ಮೀಟರ್ ವರೆಗೆ; ಮತ್ತು

(vi) ಕೊರೆಯುತ್ತಿರುವ ಮತ್ತು ತೋಡುತ್ತಿರುವ ವಸತಿ ಅಪಾರ್ಟ್‌ಮೆಂಟ್‌ಗಳು ಮತ್ತು ಗೃಹ ಸಮೂಹ ಸೊಸೈಟಿಗಳು,-

(ಎ) ಕುಡಿಯುವ ಮತ್ತು ಗೃಹ ಬಳಕೆಗಳಿಗಾಗಿ, ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಪ್ರತಿ ದಿನಕ್ಕೆ 20 ಘನ ಮೀಟರ್‌ಗಳವರೆಗೆ ಅಂತರ್ಜಲವನ್ನು ತೆಗೆಯುವುದು; ಮತ್ತು

(ಬಿ) ಸರ್ಕಾರಿ ಸ್ಕೀಮುಗಳಡಿ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿರುವ ವಸತಿ ಘಟಕಗಳು.

(1ಬಿ) ಅಂತರ್ಜಲವನ್ನು ಹೊರತೆಗೆಯುವ ಮತ್ತು ಅದನ್ನು ದೊಡ್ಡ ಪ್ರಮಾಣದಲ್ಲಿ ನೀರು ಸರಬರಾಜುದಾರರಾಗಿ ಸರಬರಾಜು ಮಾಡುವ ಎಲ್ಲಾ ಖಾಸಗಿ ಟ್ಯಾಂಕರ್‌ಗಳು, ಸರ್ಕಾರವು ಅಧಿಸೂಚಿಸಬಹುದಾದಂತೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅಂತರ್ಜಲ ಹೊರತೆಗೆಯುದಕ್ಕಾಗಿ ನಿರಕ್ಷೇಪಣಾ ಪತ್ರವನ್ನು ಹೊಂದಿರತಕ್ಕದ್ದು."

**4. ಪ್ರಕರಣ 17ರ ತಿದ್ದುಪಡಿ**.- ಮೂಲ ಅಧಿನಿಯಮದ 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿರುವ (ಜೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-1) ಅಂತರ್ಜಲ ಹೊರತೆಗೆಯುವುದನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿದ ಮಾರ್ಗಸೂಚಿಗಳನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಹೊರಡಿಸತಕ್ಕದ್ದು, ಅಳವಡಿಸಿಕೊಳ್ಳತಕ್ಕದ್ದು ಮತ್ತು ಅಧಿಸೂಚಿಸತಕ್ಕದ್ದು;

(ಜೆ-2) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಯಾವುದೇ ಪ್ರದೇಶಕ್ಕಾಗಿ ಜಿಲ್ಲಾ ಸಮಿತಿ ಅಥವಾ ಯಾವುದೇ ಸಮಿತಿಯನ್ನು ರಚಿಸತಕ್ಕದ್ದು; ಮತ್ತು

(ಜೆ-3) ಅಂತರ್ಜಲದ ಸಮರ್ಪಕ ನಿಯಂತ್ರಣ ಮತ್ತು ಬಳಕೆ ಅಥವಾ ಯಾವುದೇ ಇತರ ವಿಷಯಗಳಲ್ಲಿ ಅವರುಗಳ ಪೈಕಿ ಅಥವಾ ಹೊರಗಿನವರಿಂದ ಪ್ರಾಧಿಕಾರಕ್ಕೆ ಸಲಹೆ ನೀಡಲು ಅಥವಾ ಸಮಾಲೋಚಿಸಲು ಒಂದು ಅಥವಾ ಹೆಚ್ಚಿನ ಸದಸ್ಯರು, ತಜ್ಞರನ್ನು ಹೊಂದಿರುವ ಉಪ-ಸಮಿತಿಯನ್ನು ರಚಿಸತಕ್ಕದ್ದು."

**5. ಪ್ರಕರಣ 18ರ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿರುವ ಮಾರ್ಗಸೂಚಿಗಳ ಆಧಾರದ ಮೇಲೆ ವಾಣಿಜ್ಯ, ಕೈಗಾರಿಕೆ, ಗಣಿಗಾರಿಕೆ ಯೋಜನೆಗಳು, ಮೂಲಸೌಕರ್ಯ ಯೋಜನೆಗಳು ಮತ್ತು ಸರ್ಕಾರವು ಅಧಿಸೂಚಿಸಿದಂತೆ ದೊಡ್ಡಪ್ರಮಾಣದ ನೀರು ಸರಬರಾಜಿನ ಬಳಕೆಗಾಗಿ ಹೊರತೆಗೆಯುವ ಅಂತರ್ಜಲದ ಪ್ರಮಾಣದ ಮೇರೆಗೆ ಪ್ರಾಧಿಕಾರವು ಸೂಕ್ತ ದರಗಳನ್ನು ವಿಧಿಸಬಹುದು."

**6. ಪ್ರಕರಣ 32ರ ತಿದ್ದುಪಡಿ.-** ಮೂಲ ಅಧಿನಿಯಮದ 32ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರ (ಬಿ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಈ ಅಧಿನಿಯಮದ 17ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡದ ಅಡಿಯಲ್ಲಿ ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಒದಗಿಸಲು ಅಗತ್ಯಪಡಿಸಲಾಗಿದ್ದು,-

(i) ಅಂಥ ಮಾಹಿತಿ ಅಥವಾ ವಿವರಪತ್ರವನ್ನು ಒದಗಿಸಲು ಉದ್ದೇಶ ಪೂರ್ವಕವಾಗಿ ನಿರಾಕರಿಸಿದರೆ ಅಥವಾ ಕಾನೂನು ಬದ್ಧ ಕಾರಣವಿಲ್ಲದೇ ಉಪೇಕ್ಷಿಸಿದರೆ ; ಅಥವಾ

(ii) ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಅದು ಸುಳ್ಳು ಎಂಬುದಾಗಿ ತಿಳಿದೂ ಉದ್ದೇಶ ಪೂರ್ವಕವಾಗಿ ಒದಗಿಸಿದರೆ ಅಥವಾ ಒದಗಿಸಲು ಕಾರಣನಾದರೆ ;

- ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿತನಾಗತಕ್ಕದ್ದು. ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮತ್ತು ತರುವಾಯದ ವಿಫಲತೆ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ ಅಂಥ ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಪ್ರತಿದಿನಕ್ಕೆ ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ದಂಡವನ್ನು ವಿಧಿಸತಕ್ಕದ್ದು.

(ii) ಉಪಪ್ರಕರಣ (2)ರಲ್ಲಿರುವ "ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) ಉಪಪ್ರಕರಣ (4)ರಲ್ಲಿರುವ "ಹತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iv) ಉಪಪ್ರಕರಣ (4)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ಸಿಂಧುವಾದ ನಿರಾಪೇಕ್ಷಣಾ ಪತ್ರವನ್ನು ಪಡೆಯದ ಹೊರತು ನೀರನ್ನು ತೆಗೆಯುವ ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಸದರಿ ನಿರಾಕ್ಷೇಪಣಾ ಪತ್ರವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿದ ಮಾರ್ಗಸೂಚಿಗಳ ಆಧಾರದ ಮೇಲೆ ಸೂಕ್ತ ಮಾರ್ಪಾಡುಗಳೊಂದಿಗೆ ಸರ್ಕಾರವು ಅಧಿಸೂಚಿಸಿದಂಥ ದಂಡನೆಗಳೊಂದಿಗೆ ದಂಡಿತನಾಗತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT
## NOTIFICATION
## NO.DPAL 54 SHASHANA 2025, BENGALURU, DATED:12.09.2025

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 63)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

# KARNATAKA ACT NO. 63 OF 2025

(First published in the Karnataka Gazette Extra-ordinary on the 12th day of September, 2025)

## THE KARNATAKA GROUND WATER (REGULATION AND CONTROL OF DEVELOPMENT AND MANAGEMENT) (AMENDMENT) ACT, 2025

(Received the assent of the Governor on the 11th day of September, 2025)

An Act further to amend the Karnataka Ground water (Regulation and Control of Development and Management) Act, 2011.

Whereas it is expedient further to amend the Karnataka Ground water (Regulation and Control of Development and Management) Act, 2011 (Karnataka Act 25 of 2011), for the purposes hereinafter appearing.

Be it enacted by the Karnataka State Legislature in the Seventy-sixth year of the Republic of India as follows:

**1. Short title and commencement.** (1) This Act may be called the Karnataka Ground Water (Regulation and Control of Development and Management) (Amendment) Act, 2025.

(2) It shall come into force at once.

**2. Amendment of section 3.** In the Karnataka Ground Water (Regulation and Control of Development and Management) Act, 2011 (Karnataka Act 25 of 2011) (hereinafter referred to as the principal Act), in section 3, in sub section (3),-

(i) for clause (a), the following shall be substituted, namely:-

"(a) The Secretary to Government incharge of the Minor Irrigation and Ground water development, Government of Karnataka who shall be the chair person."

(ii) for clause (b), the following shall be substituted, namely:-

“(b) The Director, Groundwater Directorate, who shall be the Member Secretary."

(iii) for clause (f), the following shall be substituted, namely:-

“(f) The Chief Engineer, Rural Drinking Water and Sanitation Department.”

(iv) for clause (h), the following shall be substituted, namely:-

"(h) The Chief Engineer of south zone, Minor Irrigation and Groundwater Development Department."

**3. Amendment of section 11.-** In the principal Act, in section 11,-

(i) for the heading, the following shall be substituted, namely:-

**"11. Grant of permit to extract and use of Ground Water in Notified and Non-Notified Areas**.",

(ii) for sub-section (1), the following shall be substituted, namely:-

"(1) Subject to the provisions of any other law for time being in force relating to the protection of public sources of drinking water, no ground water user, except those exempted under sub-section (1-A), shall drill or dig a well or extract, for any purpose in a notified and Non notified area without obtaining permit or No Objection Certificate from the Authority.

(1-A). Categories of consumers who are exempted from obtaining permission or No Objection Certificate. The following categories of consumers shall be exempted from Obtaining Permit for drilling new Borewell and seeking No Objection Certificate for ground water extraction namely:-

(i) Individual domestic consumers in both rural and urban areas for drinking water and domestic uses;
(ii) Rural drinking water supply schemes;
(iii) Armed Forces Establishments and Central Armed Police Forces establishments in both rural and urban areas;
(iv) Agricultural activities;
(v) All industries or mining projects or infrastructure projects drawing ground water only for drinking or domestic purposes up to 5 Cum per day in all assessment units, and
(vi) Residential apartments and group housing societies who drill or dig,-

(a) For drinking water and domestic uses, drawing ground water up to 20 m3 per day subject to the conditions specified in the guidelines; and
(b) Dwelling units for Economically Weaker Sections under the Government schemes.

(1-B) All private tankers abstracting ground water and use it for supply as bulk water suppliers shall have No Objection Certificate for ground water abstraction from the concerned authority as notified by the Government."

**4. Amendment of section 17.**- In the Principal Act, in section 17, in sub-section (1), after clause (j), the following new clauses shall be inserted, namely:-

"(j-1) to issue, adopt and notify the guidelines issued by central groundwater authority for regulating and controlling the ground water extraction with suitable modifications;

(j-2) to constitute the district committee or any committee for any area to implement the purpose of this Act; and

(j-3) to constitute a sub-committee consist of one or more members, experts from among themselves or outsiders to suggest or advice the authority in proper regulation or use of ground water or in any other matter."

**5. Amendment of section 18.-** In the Principal Act, in section 18, for sub-section (3), the following shall be substituted, namely:-

"(3) The authority may impose appropriate charges on the quantum of ground water extracted for the use of commercial, industrial, mining projects, infrastructure projects and bulk water supply as notified by the Government on the basis of guidelines issued by the Central Ground Water Authority."

**6. Amendment of section 32.-** In the Principal Act, in section 32,-

(i) in sub-section (1),for clause (b), the following shall be substituted, namely:-

"(b) having been required to furnish any information or return under clause (f) of sub-section (1) of section 17 of this Act,-

(i) Willfully refuses or without lawful excuse, neglects to furnish such information or return; or

(ii) Willfully furnishes or causes to be furnished any information or return which he knows to be false:

- Shall be liable for punishment with penalty which may extend to Fifty thousand rupees. In the case of continuing and subsequent failure or contravention, an additional Penalty which may extend to one thousand rupees for every day during which such failure or contravention continues, shall be imposed."

(ii) in sub-section (2), for the words "five thousand," the words "twenty five thousand", shall be substituted;

(iii) in sub-section (4), for the words "ten thousand", the words "twenty five thousand", shall be substituted; and

(iv) after sub-section (4), the following shall be inserted, namely:-

"(5) Any person extracts the water without obtaining valid No Objection Certificate and violates the provisions of this Act and said No Objection Certificate, punishable with penalty as notified by the Government on the basis of guidelines issued by the Central Ground Water Authority, with suitable modifications."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of the ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025 (2025 ಕರ್ನಾಟಕ ಅಧಿನಿಯಮ ಸಂಖ್ಯೆ: 63) be published in the official Gazette under clause (3) of Article 348 of the Constitution of India.

**THAAWARCHAND GEHLOT**
**GOVERNMENT OF KARNATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH